ಶೀತಲಗೃಹಗಳು ಬೇಕೆಂದು ತೀರ್ಮಾನಮಾಡಿ ಅಲ್ಲಿಗೆ ಕೊಡುವಂತಹ ಪ್ರಕ್ರಿಯೆ ಸರ್ಕಾರದ ಮುಂದಿದೆಯೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಎಷ್ಟು ಭೂಮಿ ಬೇಕಾಗಿದೆ, ಎಷ್ಟು ಬೇಗನೆ ಮಾಡುತ್ತೀರಿ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸದಸ್ಯರ ಜೊತೆ ನಾನು ಮುಳಬಾಗಿಲಿಗೆ ಹೋದಾಗ ಮಾತನಾಡಿದ್ದೇನೆ. ಸಂಬಂಧಪಟ್ಟ ಜಾಗದ ಬಗ್ಗೆ ಕೇಳಿಕೊಂಡಿದ್ದೇನೆ, ಆ ಜಾಗದ ರೆಕಾರ್ಡ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದಷ್ಟುಬೇಗ ಸೆಂಟ್ರಲ್ ವೇರಹೌಸಿಂಗ್‌ನವರು ಎರಡು ಶೀತಲಗೃಹಗಳನ್ನು ಕಟ್ಟಬೇಕು. ಒಂದು ಮುಳಬಾಗಿಲು ಮತ್ತೊಂದು ಶ್ರೀನಿವಾಸಪುರ. ಮೂರನೆಯವಾರ ಅಂತ್ಯವಾಗುವ ಸಂದರ್ಭಕ್ಕೆ ಅವರು ಕೂಡ ನಮ್ಮ ಜೊತೆ ಮಾತುಕತೆಯನ್ನು ಮಾಡಬೇಕಾಗಿತ್ತು. ಕಡೆಯ ವಾರದಲ್ಲಿ ಅಧಿಕಾರಿಗಳ ಸಮೇತ ತಾಲ್ಲೂಕಿನ ಶಾಸಕರನ್ನು ಕರೆಸುತ್ತೇನೆ. ಈ ವಿಚಾರವನ್ನು ನಾನು ಮುಂಚಿತವಾಗಿ ತಿಳಿಸುತ್ತೇನೆ.

ಪ್ರಾಥಮಿಕ ಸಹಕಾರಿ ಸಂಘಗಳ ನೌಕರರಿಗೆ ವೇತನ ಶ್ರೇಣಿ

313-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗೆ ಸರಿಯಾದ ವೇತನ ಶ್ರೇಣಿ ಇಲ್ಲದೆ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾ ಸೌಲಭ್ಯಗಳನ್ನು ಪ್ರಾಥಮಿಕ ಸಹಕಾರ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ದೊರಕಿಸಿಕೊಡಲು ಸರ್ಕಾರ ಯೋಚಿಸಿದೆಯೇ?

ಇ) ಈ ವಿಷಯದಲ್ಲಿ ಸರ್ಕಾರ ಕ್ರಮ ಕೈಗೊಂಡಿದೆಯೇ ಹಾಗೂ ಸರ್ಕಾರದ ನೀತಿ ಏನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಹೌದು

ಆ) ಇಲ್ಲ

ಇ) ಈ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿ ಶಿಫಾರಸ್ಸು ಮಾಡಲು ಸರ್ಕಾರ ಸಮಿತಿಗಳನ್ನು ನೇಮಿಸಿ ವರದಿ ಪಡೆದು ಸಮಿತಿಗಳ ಶಿಫಾರಸ್ಸಿನ ಪ್ರಕಾರ ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಿರುತ್ತದೆ. ಸಹಕಾರ ಸಂಘಗಳ ಸಾಂಪತ್ತಿಕ ಸ್ಥಿತಿಗೊಳಪಟ್ಟು ಸಿಬ್ಬಂದಿಯ ವೇತನ ಶ್ರೇಣಿಯನ್ನು ನಿಗಧಿಗೊಳಿಸಬೇಕೆಂಬುದು ಸರ್ಕಾರದ ನೀತಿಯಾಗಿರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರಾಥಮಿಕ ಸಹಕಾರಸಂಘಗಳ ಕಾರ್ಯದರ್ಶಿ ಮತ್ತು ಸಿಬ್ಬಂದಿಗೆ ಸರಿಯಾದ ವೇತನಶ್ರೇಣಿ ಇಲ್ಲದೆ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಹಕಾರ ಸಚಿವರು "ಹೌದು" ಎಂದು ಹೇಳುತ್ತಿದ್ದಾರೆ. ಅವರಿಗೆ ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾಸೌಲಭ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆಯೇ ಅಂದರೆ "ಇಲ್ಲ"ವೆಂದು ಹೇಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಸಂಘಗಳು ಅಂದರೆ ಹಾಲು ಉತ್ಪಾದಕರ ಸಹಕಾರಸಂಘ, ಪತ್ತಿನ ವ್ಯವಸಾಯ ಸೇವಾ ಸಹಕಾರಸಂಘ, ಎಣ್ಣೆಕಾಳುಗಳ ಸಹಕಾರಸಂಘಗಳು ಇವತ್ತು

ಅತಿವೃಷ್ಟಿ ಅನಾವೃಷ್ಟಿಯಿಂದ ಗ್ರಾಮೀಣಪ್ರದೇಶಗಳ ಸಹಕಾರಸಂಘಗಳು ಆರ್ಥಿಕ ಪರಿಸ್ಥಿತಿಯಲ್ಲಿ ದುರ್ಬಲವಾಗಿವೆ. ಗ್ರಾಮೀಣ ಭಾಗದಲ್ಲಿ ಕೆಲಸ ಮಾಡತಕ್ಕ ಕಾರ್ಯದರ್ಶಿಗಳು ಮತ್ತು ಇತರೆ ಸಿಬ್ಬಂದಿಗಳು ಇವತ್ತು ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಬೇರೆಲ್ಲ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕವರಿಗೆ ಸರ್ಕಾರಿ ನೌಕರರಿಗೆ ಸಿಗುವ ವೇತನಶ್ರೇಣಿ ಮತ್ತು ನಿವೃತ್ತಿವೇತನ ಕೊಟ್ಟಿದ್ದಾರೆ. ಆದರಲ್ಲೂ ಸರ್ಕಾರ ಸಹಕಾರ ಕ್ಷೇತ್ರಗಳಲ್ಲಿ ಕೆಲಸ ಮಾಡತಕ್ಕ ನೌಕರರ ಬಗ್ಗೆ ಯೋಚನೆ ಮಾಡಲಿಲ್ಲವೆಂದು ಉತ್ತರ ಕೊಟ್ಟರೆ ಹೇಗೆ? ಗ್ರಾಮೀಣಭಾಗದ ರೈತರು ರೈತರ ಪರವಾಗಿರತಕ್ಕ ಸಹಕಾರಸಂಘಗಳು ಆರ್ಥಿಕ ದಿವಾಳಿಯಾಗಿವೆ. ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಸಿಲುಕಿರತಕ್ಕ ರೈತರ ಬಗ್ಗೆ ಯೋಚನೆ ಮಾಡುವುದಿಲ್ಲ. ಈ ಸರ್ಕಾರ ಸಹಕಾರಸಚಿವರು ಗ್ರಾಮೀಣ ಜನರ ಬಗ್ಗೆ ಕೆಲಸ ಮಾಡತಕ್ಕ ಈ ನೌಕರರ ಬಗ್ಗೆ ಈಗಲಾದರೂ ಗಮನಹರಿಸಿ ಇವರಿಗೆ ಸರ್ಕಾರಿ ನೌಕರರಿಗೆ ಇರುವ ಸೇವಾಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ಬಗ್ಗೆ ಅಲೋಚನೆ ಮಾಡಿ ಅಜ್ಜಿಬಾಳ ಹೆಗಡೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಆ ಸಮಿತಿ ವರದಿ ಕೊಟ್ಟಮೇಲೆ ಅದನ್ನು ಜಾರಿಗೊಳಿಸುವ ಸಂದರ್ಭ ಬಂದಾಗ ಸಹಕಾರಸಂಘಗಳ ನೌಕರರ ಒಕ್ಕೂಟಗಳೆಲ್ಲ ಸೇರಿ ಅದಕ್ಕೆ ಹೈಕೋರ್ಟಿನಲ್ಲಿ ಸ್ಟೇ ತಂದರು. ಆದ್ದರಿಂದ ಅದನ್ನು ಜಾರಿಗೊಳಿಸಲಿಕ್ಕೆ ಸಾಧ್ಯವಾಗಲಿಲ್ಲ. ಮತ್ತೆ ಈ ವಿಷಯವನ್ನು ಆಲೋಚನೆ ಮಾಡುವ ಸಂದರ್ಭ ಒದಗಿದೆ. ಮುಂದೆ ಸಾಧ್ಯವಾದಷ್ಟು ಬೇಗ, ಏಕೆಂದರೆ ಸಹಕಾರಸಂಘಗಳು ಒಂದೇ ರೀತಿಯಿಲ್ಲ. ನಾನಾ ಹಂತದಲ್ಲಿ ನಾನಾ ಮುಖಗಳಲ್ಲಿ ಬೆಳೆದಿವೆ. ಸಂಬಳವನ್ನು ಸರ್ಕಾರಿನೌಕರರಿಗೆ ಇರುವ ಹಾಗೆ ನಿರ್ದಿಷ್ಟವಾಗಿ ಗೊತ್ತುಮಾಡುವುದಕ್ಕೆ ತೊಡಕಾಗಿದೆ. ಇದನ್ನು ಏನು ಮಾಡಬೇಕೆಂದು ಪರ್ಯಾಲೋಚನೆ ಮಾಡಿ ಯಾವ ರೀತಿ ಮಾಡಬೇಕೆಂದು ವಿಚಾರ ಮಾಡಲಾಗುತ್ತಿದೆಯೆಂದು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ವರದಿ ಬಂದಾಗ ಸಹಕಾರಸಂಘಗಳ ಆರ್ಥಿಕ ಪರಿಸ್ಥಿತಿ ಬೇರೆ ಇತ್ತು. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸರ್ಕಾರದ ತಪ್ಪು ನೀತಿಯಿಂದ ಇವತ್ತು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳ ಕೊಡದಿರತಕ್ಕ ದುಸ್ಥಿತಿಗೆ ಬಂದಿರುವುದು ತಮಗೆ ಗೊತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ತನ್ನ ಬೊಕ್ಕಸದಿಂದ ಸಹಕಾರಿಸಂಘಗಳಲ್ಲಿ ಕೆಲಸ ಮಾಡತಕ್ಕ ಕಾರ್ಯದರ್ಶಿಗಳು ಮತ್ತು ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ವಿಚಾರ ಮಾಡಿದೆಯೇ ಎಂದು ನಾನು ಪ್ರಶ್ನೆ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈ ವಿಷಯವನ್ನು ಪೂರ್ಣವಾಗಿ ಚರ್ಚೆಮಾಡಿ ಸಮಿತಿಯಲ್ಲಿ ಆಲೋಚನೆ ಮಾಡಿ ವರದಿಯನ್ನು ಕೊಟ್ಟಮೇಲೆ....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ಸಹಕಾರ ಸಚಿವರು ಉತ್ತರ ಹೇಳುವುದಕ್ಕೆ ಅನುಕೂಲ ಮಾಡುತ್ತಿದ್ದೇನೆ, ಅದಕ್ಕಾಗಿ ಹೇಳುತ್ತಿದ್ದೇನೆ. ಸಹಕಾರಸಂಘಗಳ ಕಾರ್ಯದರ್ಶಿಗಳ ಬಗ್ಗೆ ಮೊದಲಿನಿಂದಲೂ ಒಂದು ಕಮಿಟಿ ಇತ್ತು. ಅಜ್ಜಿಬಾಳ ಹೆಗಡೆಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಗಿತ್ತು. ಆ ಕಮಿಟಿಯವರು ಮಹಾರಾಷ್ಟ್ರದಲ್ಲಿ ಯಾವ ಪ್ರಕಾರ ಮಾಡುತ್ತಿದ್ದಾರೆ ಆ ಪ್ರಕಾರ ಸರ್ಕಾರ 50 ಪರ್ಸೆಂಟ್ ಕೊಡಬೇಕು, 25 ಪರ್ಸೆಂಟ್ ಅಪೆಕ್ಸ್‌ಬ್ಯಾಂಕಿನವರು ಕೊಡಬೇಕು ಹೀಗೆ ನೀತಿನಿರೂಪಣೆ ಮಾಡಿದ್ದರು. ಆ ಪ್ರಕಾರ ನೀವು ಮಾಡುತ್ತೀರಾ? ಆ ಪ್ರಕಾರ ಕಾನೂನು ಮಾಡಿ, ಇಲ್ಲದಿದ್ದರೆ ಸಹಕಾರಸಂಘಗಳ ಗತಿ ದೇವರೇ ಗತಿ. ಅವರಿಗೆ ಸಂಬಳವಂತೂ ಇಲ್ಲ. ನಿನ್ನೆ ಮಾರ್ಕೆಟಿಂಗ್ ಟಿಎಪಿಎಂಸಿ ಕಾರ್ಯದರ್ಶಿಗಳು ಮುಷ್ಕರ ಮಾಡಿದರು. ಇವರು ಕೂಡ ಮುಷ್ಕರ ಮಾಡುತ್ತಾರೆ. ಇದೇ ರೀತಿ ಸಹಕಾರಸಂಘಗಳು ಮುಂದುವರಿದರೆ ಎಲ್ಲ

ಸಹಕಾರಸಂಘಗಳು ಮೂಲೆಗೆ ಹೋಗುತ್ತವೆ. ಅದಕ್ಕಾಗಿ ಏನಾದರೂ ಯೋಚನೆ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಕಮಿಟಿ ರಿಪೋರ್ಟನ್ನು ಬೇಗ ಜಾರಿಗೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಮಿತಿಯ ರಿಪೋರ್ಟನ್ನು ಜಾರಿಗೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದಾಗ ಸಹಕಾರಸಂಘಗಳ ನೌಕರರ ಒಕ್ಕೂಟದವರು ಹೈಕೋರ್ಟ್‌ನಿಂದ ಸ್ಟೇ ತಂದರು. ಮುಂದಿನ ಅಲೋಚನೆ ಮಾಡುವುದಕ್ಕೆ ಆಗದೆ ಅಲ್ಲಿಗೆ ನಿಂತಿದೆ. ಮುಂದೆ ಏನು ಮಾಡಬೇಕೆಂದು ಸರ್ಕಾರವೇನೂ ಅಲೋಚನೆ ಮಾಡದೆ ಇಲ್ಲ. ಸಹಕಾರಕ್ಷೇತ್ರ ಅನೇಕ ಕ್ಷೇತ್ರಗಳಲ್ಲಿ ರೈತರಿಗೆ ಸಹಾಯವಾಗತಕ್ಕ ರೀತಿಯಲ್ಲಿ ಮನೆ ಕಟ್ಟುವುದಕ್ಕೆ ಆಗಬಹುದು, ವ್ಯವಸಾಯ ಅಭಿವೃದ್ಧಿಯಾಗಬಹುದು. ಈ ರೀತಿ ರೈತನಿಗೆ ಸಹಾಯ ಮಾಡುವುದಕ್ಕೆ ನಾನಾ ವಿಧವಾದ ಕಾರ್ಯಕ್ರಮಗಳು ಈ ಸಹಕಾರಸಂಘಗಳ ಮುಖಾಂತರ ನಡೆಯಬೇಕಾಗಿರುವುದರಿಂದ ನಿರ್ದಿಷ್ಟವಾಗಿ ಸಲಹೆ ಕೊಡುವುದಕ್ಕೆ ಕಷ್ಟ. ಅಜ್ಜಿಬಾಳ ಹೆಗಡೆಯವರು ತಮ್ಮ ವರದಿಯಲ್ಲಿ ವಿವರವಾಗಿ ತಿಳಿಸಿದ್ದಾರೆ. ಕಾರ್ಯದರ್ಶಿಗಳಿಗೆ ಎಷ್ಟು ಸಂಬಳ ಕೊಡಬೇಕು, ಅವರ ಸಹಾಯಕರಿಗೆ ಎಷ್ಟು ಕೊಡಬೇಕು, ದ್ವಿತೀಯದರ್ಜೆ ಗುಮಾಸ್ತರಿಗೆ ಎಷ್ಟು ಕೊಡಬೇಕು, ಮಾರಾಟಗಾರರಿಗೆ ಎಷ್ಟು ಕೊಡಬೇಕು, ಅಟೆಂಡರ್‌ಗೆ ಎಷ್ಟಿರಬೇಕು, ನಾನಾ ಹಂತದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಯಾವರೀತಿ ಸಂಬಳ ಕೊಡಬೇಕೆಂದು ವಿವರವಾದ ವರದಿಯನ್ನು ಕೊಟ್ಟಿದ್ದಾರೆ. ಆದರೆ ಸಹಕಾರ ಸಂಘಗಳ ನೌಕರರೆಲ್ಲರೂ ಸೇರಿ ಹೈಕೋರ್ಟ್‌ನಲ್ಲಿ ಸ್ಟೇ ತಂದಿರುವುದರಿಂದ ಅದನ್ನು ಜಾರಿಗೆ ಕೊಡಲಿಲ್ಲ. ಮುಂದೇನು ಮಾಡಬೇಕೆಂದು ಅಲೋಚನೆ ಮಾಡುವ ಪರಿಸ್ಥಿತಿಯಲ್ಲಿ ಸರ್ಕಾರ ಇದೆ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಭೂಮಿಯನ್ನು ಬಿಡುಗಡೆ ಮಾಡುವುದು

29 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಜಿ.ವಿ.ಕೆ.ರಾವ್ ವರದಿಯ ಮೇಲೆ ತಡೆಹಿಡಿಯಲಾಗಿದ್ದ ಸುಮಾರು 8000 ಎಕರೆ ಭೂಮಿಯನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಸಹಕಾರ ಸಂಘಗಳಿಗೆ ಎಷ್ಟು ಭೂಮಿಯನ್ನು ಅವುಗಳ ಸ್ವಾಧೀನಕ್ಕೆ ಕೊಡಲಾಗಿದೆ, ಉಳಿದವುಗಳಿಗೆ ಭೂಸ್ವಾಧೀನ ಕೊಡದಿರಲು ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಸರ್ಕಾರ ಇದುವರೆಗೆ 33 ಗೃಹನಿರ್ಮಾಣ ಸಹಕಾರ ಸಂಘಗಳಿಗೆ 2097.19 ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರಿಸಿರುತ್ತದೆ.

ಆ) ಇದೂವರೆಗೂ 33 ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಒಟ್ಟು 2097 ಎಕರೆ 19 ಗುಂಟೆ ಜಮೀನನ್ನು ಹಸ್ತಾಂತರಿಸಲಾಗಿದೆ. ಈ ಸಂಘಗಳ ಹಾಗೂ ಅದರ ಸದಸ್ಯರ ನೈಜತೆ ಮತ್ತು ಅವುಗಳು ನಿರ್ಮಿಸಿರತಕ್ಕ ಬಡಾವಣೆಗಳ ಬಗ್ಗೆ ಪರಿಶೀಲನೆ ನಡೆಯುತ್ತಿದ್ದು ಅವುಗಳು ಪೂರ್ಣಗೊಂಡ ನಂತರ ಉಳಿದ ಸಂಘಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಮಾಡುವ ಭೂಮಿ ಹಸ್ತಾಂತರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಸರ್ಕಾರದವರು ಇದುವರೆಗೆ 33 ಗೃಹನಿರ್ಮಾಣ ಸಹಕಾರಸಂಘಗಳಿಗೆ 2097.19 ಗುಂಟೆ ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರ ಮಾಡಿದ್ದೇವೆ ಉಳಿದವರಿಗೆ ಪರಿಶೀಲನೆ